**ದಿನಾಂಕಃ 04–03–2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಂ.ಬಿ.ಹೆಚ್. ವಕೀಲರಿಂದ 3 ಮತ್ತು 4 ನೇ ಪ್ರತಿವಾದಿ ಪರಃ**

ನನ್ನ ತಾಯಿ ಮತ್ತು ದೊಡ್ಡಮ್ಮ ಎಂದರೆ ನಿಜ. ಅವರಿಗೆ ಓದಲು ಬರೆಯಲು ಬರುತ್ತದೆ. ಈಗಲೂ ನನ್ನ ತಾಯಿ ಮತ್ತು ದೊಡ್ಡಮ್ಮ ಓದುವುದು ಬರೆಯುವುದು ಮಾಡುತ್ತಾರೆ ಎಂದರ ವಯಸ್ಸಾದ್ದರಿಂದ ಕಣ್ಣು ಕಾಣುವುದಿಲ್ಲ ಎಂದು ಹೇಳುತ್ತಾರೆ. ಈ ಬಗ್ಗೆ ವೈದ್ಯಕೀಯ ದಾಖಲೆ ಹಾಜರು ಪಡಿಸಿರುವುದಿಲ್ಲ. ಈಗ್ಗೆ ಸುಮಾರು 5-6 ವರ್ಷದ ಹಿಂದೆ ನನ್ನ ತಾಯಿ ಮತ್ತು ದೊಡ್ಡಮ್ಮ ನನಗೆ ಮುಕ್ತಿಯಾರ ನಾಮೆ ಬರೆದುಕೊಟ್ಟಿರುತ್ತಾರೆ. ಚಾಪಾ ಕಾಗದವನ್ನು ಯಾವಾಗ ಖರೀದಿಸಲಾಗಿದೆ ಎಂದು ನೆನಪಿರುವುದಿಲ್ಲ. ನೋಟರಿಯನ್ನು ಸಾಗರದಲ್ಲಿ ಮಾಡಿಸಿರುತ್ತೇನೆ. ನಮ್ಮ ದೊಡ್ಡಮ್ಮ ಹುಬ್ಬಳ್ಳಿಯಲ್ಲಿ ವಾಸವಾಗಿರುತ್ತಾರೆ. ನನ್ನ ತಾಯಿ ಸಾಗರದಲ್ಲಿ ವಾಸವಾಗಿರುತ್ತಾರೆ. ಮುಕ್ತಿಯಾರ ನಾಮೆ ಬರೆದುಕೊಡಲು ನಮ್ಮ ದೊಡ್ಡಮ್ಮ ಸಾಗರಕ್ಕೆ ಬಂದಿದ್ದರು. ನಿಪಿ-1 ಮುಕ್ತಿಯಾರ ನಾಮೆ ದಿನಾಂಕಃ 09.01.2020 ರಂದು ಖರೀದಿಸಲಾಗಿದೆ ಎಂದರೆ ನಿಜ. ಅದು 04.02.2020 ರಲ್ಲಿ ನೋಟರಾಯಿಸ್ಡ ಆಗಿರುತ್ತದೆ. ನನ್ನ ತಾಯಿ ಮತ್ತು ದೊಡ್ಡಮ್ಮ ಆರೋಗ್ಯವಾಗಿದ್ದಾರೆ ಅವರು ನ್ಯಾಯಾಲಯಕ್ಕೆ ಬಂದರೆ ಸತ್ಯಂಶ ಗೊತ್ತಾಗುತ್ತದೆ ಎಂದು ನಾನು ಮುಕ್ತಿಯಾರ ನಾಮೆ ಪಡೆದು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹಲವು ಆಸ್ತಿಗಳ ಮೇಲೆ ದಾವೆ ಮಾಡಿರುತ್ತೇನೆ ಅವುಗಳ ಸರ್ವೆ ನಂಬರ್ ಹೇಳಲಾಗುವುದಿಲ್ಲ. ದಾವಾ ಐಟಂ ನಂ. 5 ನೇ ಆಸ್ತಿ 2 ನೇ ಪ್ರತಿವಾದಿಯ ಹೆಸರಿಗೆ ಇರಬಹುದು. ನಾನು ನಿರ್ದಿಷ್ಟವಾಗಿ ದಾಖಲೆ ನೋಡಿರುವುದಿಲ್ಲ. ಸದರಿ ಆಸ್ತಿಯ ಚೆಕ್ಕಬಂದಿ ಹೇಳಲಾಗುವುದಿಲ್ಲ. ಆಸ್ತಿಯ ಚೆಕ್ಕಬಂದಿ ನಾವು ಹೇಳಿ ಬರೆಸಿರುವುದಿಲ್ಲ, ನಮ್ಮ ತಾಯಿ ಹೇಳಿ ಬರೆಸಿರುತ್ತಾರೆ. ಈ ದಾವೆಯನ್ನು ಹಿಸ್ಸೆ ಕೋರಿ ದಾವೆ ಮಾಡಿರುತ್ತೇವೆ. ದಾವಾ ಐಟಂ ನಂ. 8 ನೇ ಆಸ್ತಿ ಯಾರ ಹೆಸರಿಗೆ ಇದೆ ಎಂದು

ಚೆಕ್ಕಬಂದಿ ಹೇಳಲಾಗುವುದಿಲ್ಲ. ನನಗೆ ಎಲ್ಲಾ ಆಸ್ತಿಗಳ ಯಾರ ಹೆಸರಿಗೆ ಇದೆ ಎಂದು ಚೆಕ್ಕಬಂದಿ ಹೇಳಲಾಗುವುದಿಲ್ಲ, ಏಕೆಂದರೆ ಆಸ್ತಿಗಳು ಬಹಳ ಇರುತ್ತವೆ. ದಾವಾ ಆಸ್ತಿಗಳು ನಾನು ನೋಡಿರುತ್ತೇನೆ. ಈ ಆಸ್ತಿಗಳಲ್ಲಿ ನಾವು ವಹಿವಾಟು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನಮ್ಮ ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿ ಎಂದು ತೋರಿಸಲು ಪಹಣಿ ಬಿಟ್ಟರೆ ಬೇರೆ ದಾಖಲೆ ಹಾಜರು ಪಡಿಸಿರುವುದಿಲ್ಲ. ದಾವಾ ಹಾಕುವ ಮೊದಲು ನಾವು ದಾಖಲೆಗಳನ್ನು ಪಡೆದು ಪರೀಶಿಲನೆ ಮಾಡಿರುತ್ತೇವೆ. ಈ ದಾವೆಯಲ್ಲಿ 3 ಮತ್ತು 4 ನೇ ಪ್ರತಿವಾದಿಗಳು ಏನು ತಕಾರಾರು ಹಾಕಿರುತ್ತಾರೆ ಎಂದು ತಿಳಿದುಕೊಂಡಿರುತ್ತೇನೆ. ನಮ್ಮ ತಾಯಿ ಮತ್ತು ದೊಡ್ಡಮ್ಮ ನಮ್ಮ ಅಜ್ಜ ಬದುಕಿದ್ದಾಗಲೇ ಮದುವೆ ಆಗಿರುತ್ತದೆ. ನನ್ನ ತಾಯಿ ಮತ್ತು ದೊಡ್ಡಮ್ಮರು ಮದುವೆಯಾಗುವ ಕಾಲಕ್ಕೆ ನಮ್ಮ ಅಜ್ಜನವರು ಏನು ಕೊಟ್ಟಿರುತ್ತಾರೆ ಇಲ್ಲ ಎಂಬುದವರ ಬಗ್ಗೆಸ ಮಾಹಿತಿ ಇರುತ್ತದೆ. ಅವರು ಆಗ ಏನು ಕೊಟ್ಟಿರುವುದಿಲ್ಲ. ಆಗ ನಾನು ಹುಟ್ಟಿದಿಲ್ಲ ಎಂದರೆ ನಿಜ. 3 ಮತ್ತು 4 ನೇ ಪ್ರತಿವಾದಿಗೆ ಆಸ್ತಿ ಹೋಗುತ್ತದೆ ಎಂದು ನನ್ನ ತಾಯಿ ಮತ್ತು ದೊಡ್ಡಮ್ಮಗೆ ಏನು ಕೊಟ್ಟಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ_ಪಾಟೀ_ಸವಾಲುಃ**

ಕೋರಿಕೆ ಮೇರೆಗೆ ಮುಂದೂಡಲಾಗಿದೆ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.